# ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ

ದಿನಾಂಕ:7-11-2023

## :ವಿಶೇಷ ಸೂಚನೆ:

1. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ವಿವಿಧ ಕಾಮಗಾರಿ/ಕಾರ್ಯಕ್ರಮಗಳಿಗೆ ಸಹಾಯಾನುದಾನ ಕೋರಿ ವಿವಿಧ ಸಂಘ/ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸುತ್ತಿರುತ್ತಾರೆ.

2. ಸದರಿ ಕೋರಿಕೆ/ಅರ್ಜಿಗಳನ್ನು ಸರ್ಕಾರ ಹಾಗೂ ಪ್ರಾಧಿಕಾರದ ನಿಯಮಗಳ ಪ್ರಕಾರ ಪರಿಶೀಲಿಸಿ, ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ತದನಂತರ ಸೂಕ್ತವಾಗಿ ಸಹಾಯಾನುದಾನಕ್ಕಾಗಿ ಪರಿಗಣಿಸಲಾಗುವುದು.

3. ಆದರೆ, ಕೆಲವು ಸಂಸ್ಥೆಗಳು ಕಡ್ಡಾಯವಾಗಿ ಅನುದಾನ ಬಿಡುಗಡೆ ಮಾಡಲೇಬೇಕೆಂಬಂತೆ ಪ್ರಾಧಿಕಾರದ ಅಧಿಕಾರಿ/ಸಿಬ್ಬಂದಿಗಳಿಗೆ ಒತ್ತಾಯಿಸುತ್ತಿರುವುದು ಹಾಗೂ ಇನ್ನೂ ಕೆಲವು ಸಂಘ/ಸಂಸ್ಥೆಗಳು ಅರ್ಜಿ ಸಲ್ಲಿಕೆಯನ್ನೆಯೇ ಮಂಜೂರಾತಿ ಎಂಬುದಾಗಿ ಪರಿಭವಿಸಿ ಕಾರ್ಯಕ್ರಮ/ಕಾಮಗಾರಿಗಳನ್ನು ಕೈಗೊಂಡಿರುತ್ತೇವೆ ಎಂದು ತಿಳಿಸಿ ಅನುದಾನ ಬಿಡುಗಡೆ ಮಾಡಿ ಎಂದು ಒತ್ತಾಯಿಸುತ್ತಿರುವುದು ನಿಯಮಬಾಹಿರವಾಗಿರುತ್ತದೆ.

   ಪ್ರಾಧಿಕಾರದ ಅನುಮೋದನೆಯಾಗದೇ ಯಾವುದೇ ಸಂಘ/ಸಂಸ್ಥೆಗಳಿಗೆ ಮುಂಗಡ ಮಂಜೂರಾತಿ/ಖಾತ್ರಿ ನೀಡಲಾಗುವುದಿಲ್ಲ. ಅಲ್ಲದೇ ಅರ್ಜಿ ಸಲ್ಲಿಸಿದ ಎಲ್ಲಾ ಸಂಘ/ಸಂಸ್ಥೆಗಳಿಗೂ ಅನುದಾನ ಬಿಡುಗಡೆ ಮಾಡುವ ಖಾತ್ರಿ ನೀಡಲಾಗುವುದಿಲ್ಲ.

4. ಹಾಗಾಗಿ, ಗಡಿ ಪ್ರಾಧಿಕಾರದಿಂದ ಸಹಾಯಾನುದಾನ ಪಡೆಯಲು ಯಾವುದೇ ರೀತಿಯ ಒತ್ತಡ ಅಥವಾ ನಿಯಮಬಾಹಿರ ಕೋರಿಕೆ ಸಲ್ಲಿಸುವುದನ್ನು ಕಡ್ಡಾಯವಾಗಿ ನಿಷೇದಿಸಲಾಗಿದೆ.

**ಸಹಿ/-**

**ಕಾರ್ಯದರ್ಶಿ**